doc-521
T.P-2

Reg No B G 155 3—8—72

55th Year of Publication ‘Satyavadi’ daily, Mysore 4

In the State – The First
Golden Jubilee Celebrated Paper
★
News, Views, Dharmic Moral Ethical Matters

ಸತ್ಯವಾದಿ

ರಾಷ್ಟ್ರದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದ್ದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ನಗರ ಆಸ್ತಿ ಮಿತಿ ಪರಿಶೀಲನೆ ಮುಂದಿನ ಅಧಿವೇಶನದಲ್ಲಿ

ತುಳಸೀ ಆಚಾರ್ಯರು ಪೂರಿ ಜಗದ್ಗುರುಗಳ ಸೂಚನೆಗೆ ಸಮ್ಮತಿಸಿದರು

ಚುರು– ಜೈನ್ ಆಚಾರ್ಯ ತುಳಸಿಯವರು ತಮ್ಮ ವಾದೋತ್ತರವಾದ ‘ಅಗ್ನಿ ಪರೀಕ್ಷೆ’ ಪುಸ್ತಕದ ಪ್ರಕಟಣೆಯನ್ನು ೮ ವರ್ಷ ನಿಲ್ಲಿಸಲು ಒಪ್ಪಿದ್ದಾರೆ – ಈ ಪುಸ್ತಕದ ವಿರುದ್ಧದ ಚಳವಳಿಯನ್ನು ಪೂರಿ ಜಗದ್ಗುರುಗಳು ನಿಲ್ಲಿಸಲಿದ್ದಾರೆ – ಆಚಾರ್ಯರು ಆ ಪುಸ್ತಕದಲ್ಲಿ ತಿಳಿಸಿರುವ, ರಾವಣನಿಗೆ ಹಲವರು ಪತ್ನಿಯರಿದ್ದರೆಂಬ ಮುಂತಾದ ವಿಷಯವನ್ನು ಸಿದ್ಧಪಡಿಸಬೇಕು.

★

ರಾಯಚೂರು ಜಿಲ್ಲೆಯಲ್ಲಿನ ವೆಚ್ಚ

ಬೆಂಗಳೂರು— ರಾಯಚೂರು ಜಿಲ್ಲೆಯಲ್ಲಿ 71–72 ನೇ ಸಾಲಿನಲ್ಲಿ ಯೋಜನಾ ಹಾಗೂ ಯೋಜನೇತರ ಕಾರ್ಯಕ್ರಮಗಳಿಗೆ ಆದ ವೆಚ್ಚ ರೂ 2553235 ; ಈ ಉದ್ದೇಶಕ್ಕಾಗಿ ಮಂಜೂರಾಗಿದ್ದ ಹಣ ರೂ. 2863054.

★

ದೇಶದಲ್ಲಿ ಟ್ರಾಕ್ಟರುಗಳು

ನವದೆಹಲಿ – 1961 ರ ಜಾನುವಾರು ಸೆನ್ಸಸ್ ಪ್ರಕಾರ ದೇಶದಲ್ಲಿ 54012 ಇವೆ

ಸಮಾಜಶಾಸ್ತ್ರ ಪಠ್ಯಪುಸ್ತಕ

ಬೆಂಗಳೂರು— ಪ್ರಸ್ತುತ ಒಂಭತ್ತನೇ ತರಗತಿಗಾಗಿ ನಮೂದಿಸಿರುವ ಸಮಾಜಶಾಸ್ತ್ರ ಪಠ್ಯಪುಸ್ತಕವನ್ನು ರಾಜ್ಯ ಶಿಕ್ಷಣಾ ಸಂಶೋಧನಾ ಇಲಾಖೆಯು ಸಮಗ್ರವಾಗಿ ಪರಿಷ್ಕರಿಸಿದ್ದು, ಆದರಲ್ಲಿ ಯಾವ ತಪ್ಪುಗಳೂ ಕಂಡುಬಂದಿಲ್ಲವೆಂದು ಪಠ್ಯಪುಸ್ತಕ ಇಲಾಖೆಯು ತಿಳಿಸಿದೆ.

★

ಸ್ವಾತಂತ್ರ್ಯದ ಬೆಳ್ಳಿ ಹಬ್ಬ

ಮೈಸೂರು ನಗರದಲ್ಲಿ ಭಾರತ ಸ್ವಾತಂತ್ರ್ಯದ ಬೆಳ್ಳಿ ಹಬ್ಬದ ಮಹೋತ್ಸವವನ್ನು ಬಹುವಿಜೃಂಭಣೆಯಿಂದ ಆಚರಿಸಬೇಕೆಂದು ಜಿಲ್ಲಾಧಿಕಾರಿ ಶ್ರೀ ಡಿ ಕೃಷ್ಣರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯು ತೀರ್ಮಾನಿಸಿದೆ.

ತೀವ್ರಗಾಮಿ ಖೈದಿಗಳಿಗೆ

ಕಲ್ಕತ್ತಾ = ಬಹ್ಯಾಂಪುರದಲ್ಲಿ 1000 ಮಂದಿಯನ್ನು ಇಡಬಹುದಾದ ಒಂದು ಸ್ಪೆಷಲ್ ಜೈಲನ್ನು ತೀವ್ರಗಾಮಿ ಖೈದಿಗಳಿಗಾಗಿಯೇ ಸ್ಥಾಪಿಸಲಾಗಿದೆಯೆಂದು ಪಶ್ಚಿಮ ಬಂಗಾಳಾ ಶಾಸನಸಭೆಯಲ್ಲಿ ತಿಳಿಸಲಾಯಿತು.

ಅಕ್ಕಾಯ್

ಬೊಂಬಾಯಿ— ಅಕ್ಕಾಯಿ ಅತಿ ಹಳೆಯ, ಕಾಲೋಚಿತವಲ್ಲದ, ಕಾಲಗಣನಾದೂಷಿತವಾಗಿದ್ದು ಮತ್ತು ಕಾಲಹರಣ ಮಾಡುವ ಆರ್ಥಿಕ ತಂತ್ರವಾಗಿರುವದರಿಂದ ಇದು ವಜಾ ಆಗಬೇಕೆಂದು ಪ್ರಖ್ಯಾತ ನ್ಯಾಯವಾದಿಗಳಾದ ಶ್ರೀ ಸಾಳ್ಸಿವಾಲಾರವರು ಹೇಳಿರುವರು.

★

ಅಂಬೇಡ್ಕರ್ ಸ್ಮಾರಕ ದಿನಾಚರಣೆ

ಮೈಸೂರು ನಗರದ ಗಾಂಧೀನಗರದಲ್ಲಿರುವ ಡಾ|| ಅಂಬೇಡ್ಕರ್ ವಿದ್ಯಾರ್ಥಿ ಹಾಗೂ ಯುವಕ ಸಂಘದಲ್ಲಿ ಡಾ|| ಅಂಬೇಡ್ಕರ್ ಸ್ಮಾರಕ ದಿನಾಚರಣೆಯನ್ನು ಮಂಗಳವಾರ ಆಚರಿಸಲಾಯಿತು ; ಪೌರಾಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು

★

ಹಕ್ಕುಬಾಧ್ಯತೆ

ಬೆಂಗಳೂರು— ವಿಧಾನ ಪರಿಷತ್ತಿನಲ್ಲಿ ನಿನ್ನೆ ಆದ ಗಲಾಟೆ ಸಂದರ್ಭದಲ್ಲಿ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಜನಸಂಘದ ಶ್ರೀ ಸುಬ್ಬಯ್ಯನವರೂ, ಅದಕ್ಕೆ ಪ್ರತಿಯಾಗಿ ಶ್ರೀ ಸುಬ್ಬಯ್ಯನವರು ಮಂತ್ರಿಗಳ ಮೇಲೂ ಹಕ್ಕುಬಾಧ್ಯತಾ ನೋಟೀಸನ್ನು ಸ್ಪೀಕರರಿಗೆ ಕೊಟ್ಟಿರುವರು.

●

ಪೋಲೀಸರ ಸಸ್ಪೆಂಡ್

ಹೈದರಾಬಾದು– ಕ್ಯಾಬರೆ ನರ್ತಕಿಯ ಮೇಲೆ ಪೋಲೀಸರು ಮಾನಭಂಗ ಅತ್ಯಾಚಾರ ನಡೆಸಿದರೆಂಬ ಆಪಾದನೆ ಸಂದರ್ಭದಲ್ಲಿ ಇಬ್ಬರು ಪೋಲೀಸು ಅಧಿಕಾರಿಗಳನ್ನು ಸಸ್ಪೆಂಡು ಮಾಡಲಾಗಿದೆ.

○ ನವದೆಹಲಿ– ಭಾರತ–ಸಾರ್ಕ್ ಮುಸ್ಸೈಸಿವ್ಲಾ ಒಪ್ಪಂದವಾಗಿದ್ದರೂ ಸಧ್ಯಕ್ಕೆ ತುರ್ತು ಪರಿಸ್ಥಿತಿಗೆಯುವಸಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ನಗರದ ಆಸ್ತಿ ಪರಿಮಿತಿ

ನವದೆಹಲಿ— ನಗರಗಳಲ್ಲಿನ ಆಸ್ತಿ ಪರಿಮಿತಿ ಮಸೂದೆಯು ಮುಂದಿನ ಪಾರ್ಲಿಮೆಂಟಿನ ಅಧಿವೇಶನದಲ್ಲಿ ತರಲಾಗುವುದೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

○

ಮರಣದಂಡನೆ

ನವದೆಹಲಿ— ದೇಶದಲ್ಲಿ ಮರಣದಂಡನೆಯನ್ನು ನಿಲ್ಲಿಸುವ ವಿಷಯವು ಸರಕಾರದ ಪರ್ಯಾಲೋಚನೆಯಲ್ಲಿಡೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಮಾಜಿ ರಾಜರಿಗೆ ಹಣ

ನವದೆಹಲಿ– ಬದಲಾವಣೆಗೊಂಡಿರುವ ಪರಿಸ್ಥಿತಿ ಸರಿಪಡಿಸಿಕೊಳ್ಳಲು ಅನುಕೂಲಿಸುವಂತೆ ಮಾಜಿ ರಾಜರಿಗೆ ಒಟ್ಟು ಮೊತ್ತ ಕೊಡಲು ಸರಕಾರ ಯೋಚಿಸುತ್ತಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

●

ಪ್ರಧಾನಿಗಳ ಚುನಾವಣಾ ಪ್ರಚಾರ ಖರ್ಚು

ಬೆಂಗಳೂರು— ಈ ವರ್ಷ ಪ್ರಾರಂಭದಲ್ಲಿ ರಾಜ್ಯದಲ್ಲಿ ಪ್ರಧಾನಿಯವರ ಚುನಾವಣಾ ಪ್ರಚಾರ ಸಂಬಂಧದಲ್ಲಿ ರಕ್ಷಣಾ ವ್ಯವಸ್ಥೆಗೆ ರೂ 3.47 ಲಕ್ಷ ಖರ್ಚಾಗಿದೆಯೆಂದೂ, ಆದರೆ ಪ್ರಜಾರಾಜ್ಯದಲ್ಲಿ ಅಂತಹ ಉನ್ನತ ಮಟ್ಟದ ಗಣ್ಯ ವ್ಯಕ್ತಿಯ ರಕ್ಷಣಾ ಕಾರ್ಯಕ್ಕೆ ಆದ ಖರ್ಚಿನ ಬಗ್ಗೆ ನಾವು ಅತೃಪ್ತಿಗೊಳ್ಳಬಾರದೆಂದೂ ಶಾಸನ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ರವರು ಹೇಳಿದರು.

★

★ ನವದೆಹಲಿ— ಅಭಾವ ಭಾಗಗಳ ಪರಿಹಾರ ಕಾರ್ಯಕ್ರಮದಲ್ಲಿ ಮೈಸೂರು ರಾಜ್ಯವು 70–71 ರಿಂದ 4 ವರ್ಷಗಳಿಗೆ ರೂ 10 ಕೋಟಿ ಸಹಾಯ ಪಡೆಯುವದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಮೈಸೂರು ಇರ್ವಿನ್ ರಸ್ತೆಯಲ್ಲಿರುವ ಭವ್ಯವಾದ
ಕಟ್ಟಡದಲ್ಲಿ
9 ನೇ ಆಗಸ್ಟ್ 72 ರ ಮಧ್ಯಾಹ್ನಾಪರ 4 ಗಂಟೆಗೆ
ಹೊಟೇಲ್ ಬಿಲಾಲ್ನ್ನು
ಮೈಸೂರು ರಾಜ್ಯದ ಸಾರಿಗೆ ಮಂತ್ರಿಯವರಾದ
ಜನಾಬ್ ಅಜೀಜ್ ಸೇಟ್
ಅವರು ಕೃಪೆಯಿಟ್ಟು ಉದ್ಘಾಟಿಸಲು ಒಪ್ಪಿರುವರೆಂದು ತಿಳಿಸಲು
ಹರ್ಷವಾಗುತ್ತದೆ
ಎಂ. ಅಬ್ದುಲ್ ರಜಾಕ್, ಮಾಲೀಕರು

ನರ್ತಕಿಯ ಮೇಲೆ ಅತ್ಯಾಚಾರ

ಹೈದರಾಬಾದು— ಒಂದು ಸುಖಭೋಗ ಹೋಟಲಿನಲ್ಲಿ ಒಬ್ಬಳು ಕ್ಯಾಬರಾ ನರ್ತಕಿ ಮೇಲೆ 4 ಜನ ಪೋಲೀಸರು ಮಾನಹಾನಿ ಅತ್ಯಾಚಾರ ನಡೆಸಿದರೆಂಬ ಬಗ್ಗೆ ಶಾಸನ ಸಭೆಯಲ್ಲಿ ಬಿಸಿಬಿಸಿ ಚರ್ಚೆ ನಡೆಯಿತು – ಈ ವಿಚಾರವು ಇನ್ನೂ ತನಿಖೆಯಲ್ಲಿರುವುದೆಂದು ಕೇಳಿದ ಸ್ಪೀಕರರು ಆಶ್ಚರ್ಯಗೊಂಡು, ರಕ್ಷಣೆಗಿರುವ ಜನರೇ ಈ ಹೀನ ವರ್ತನೆ ನಡೆಸಿರುವುದು ಕೂಡಲೇ ತನಿಖೆಯಾಗಬೇಕೆಂದರು.

★

ಪರಿಹಾರ ಹೆಚ್ಚಿಸಲಾಯಿತು

ಬೆಂಗಳೂರು— ರಾಜ್ಯದ ಸಾರಿಗೆ ಕಾರ್ಪೊರೇಷನ್ ಬಸ್ ಅಕಸ್ಮಿಕದಲ್ಲಿ ಸಾವಿಗೀಡಾದ ಸ್ಕೂಟರ್‌ನಲ್ಲಿ ಹೋಗುತ್ತಿದ್ದ 23 ವರ್ಷದ ವ್ಯಾಪಾರಿ ಸುರೇಂದ್ರಕುಮಾರ ಅಗರವಾಲ್‌ರವರ ತಂದೆತಾಯಿಗಳಿಗೆ ಮೋಟಾರು ಅಕಸ್ಮಿಕ ಹಕ್ಕು ನ್ಯಾಯಮಂಡಲಿ ಆಜ್ಞೆ ಮಾಡಿದ್ದ ರೂ. 10000 ಪರಿಹಾರವನ್ನು ಹೈಕೋರ್ಟು ರೂ. 25000 ಕ್ಕೆ ಹೆಚ್ಚಿಸಿದೆ.

ಮೈ. ಸೂರು ಸ್ಪಿ–ಡಬ್ಲ್ಯು ಡಿ.

ಟೆಂಡರ್ ಪ್ರಕಟಣೆ

ನಂ 16 / 72–73 / ತಾ. 21–7–1972.

ಈ ಕೆಳಗೆ ಕಂಡ ಕೆಲಸಗಳಿಗಾಗಿ ಮೈಸೂರು ಲೋಕೋಪಯೋಗಿ ಇಲಾಖೆಯಲ್ಲಿ ರಿಜಿಸ್ಟರ್ ಆಗಿರುವ ಕಾಲಂ ನಂ. 5 ರಲ್ಲಿ ಸೂಚಿಸಿರುವ ಸೂಕ್ತ ವರ್ಗದ ಕಂಟ್ರಾಕ್ಟರ್‌ಗಳಿಂದ ವಿಧಾಯಕವಾದ ಫಾರಂನಲ್ಲಿ ದ್ವಿಪ್ರತಿಗಳಲ್ಲಿ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ಮತ್ತು ಚಾಮರಾಜನಗರದಲ್ಲಿರುವ, ಚಾಮರಾಜನಗರ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ 17–8–1972 ರಂದು ಅಥವಾ ಅದಕ್ಕೆ ಮುಂಚೆ ಮಧ್ಯಾಹ್ನ 4 ಗಂಟೆ ವರೆಗೆ ಸ್ವೀಕರಿಸಲಾಗುವುದು. ಸಾಧ್ಯವಾದರೆ ಅದೇ ದಿನ, ಹಾಜರಿರ ಬಯಸುವ ಟೆಂಡರ್‌ದಾರರು ಅಥವಾ ಅವರ ಪ್ರತಿನಿಧಿಗಳ ಎದುರಿನಲ್ಲಿ ಅವನ್ನು ಒಡೆಯಲಾಗುವುದು. 12–8–72 ರಿಂದ 16–8–72 ರ ವರೆಗೆ ಕಚೇರಿ ಕೆಲಸದ ವೇಳೆಗಳಲ್ಲಿ ಕಾಲಂ 6 ರಲ್ಲಿ ನಮೂದಿಸಿರುವಂತೆ ಫಾರಂಗಳ ಮಾರಾಟಕ್ಕೆ ವಿಧಿಸಿರುವ ಹಣವನ್ನು ಪಾವತಿ ಮಾಡಿ (ವಾಪಸಾಗದ) ಖಾಲಿ ಟೆಂಡರ್ ಫಾರಂಗಳನ್ನು ಪಡೆಯುವುದು.

ಸೀ ಕೆಲಸದ ಹೆಸರು ನಂ	ಟೆಂಡರ್‌ಗೆ ಇಟ್ಟಿರುವ ಕೆಲಸದ ಭಾಗದ ಅಂದಾಜು ಮೊತ್ತ	ಸೀ 2½ – ಇಎಂಡಿ	ಕಂಟ್ರಾಕ್ಟರ್ ವರ್ಗ	ಕೆಲಸ ಮುಗಿಸುವ ಕಾಲಾವಧಿ (ಮಳೆಗಾಲ ಬಿಟ್ಟು)
	ರೂ	ರೂ.		
1. ಚಾಮರಾಜನಗರದಲ್ಲಿ ಸ್ಕೂಲ್ ಆಫ್ ಹೆಲ್ತ್ ಅಸಿಸ್ಟೆಂಟ್‌ರ ಕ್ವಾರ್ಟರ್ಸ್ ನಿರ್ಮಾಣ ಮಾಡುವುದು.	14151	354	1 ರಿಂದ 4	ನಾಲ್ಕು ತಿಂಗಳು
2. ಚಾಮರಾಜನಗರದ ಪಿ. ಡಬ್ಲ್ಯು ಡಿ. ಕಾಲೋನಿಯಲ್ಲಿ ರೂ. 150–299 ವೇತನ ವರ್ಗದವರಿಗಾಗಿ ಆರ್ಥ್ ಯೂನಿಟ್ ಕ್ವಾರ್ಟರ್ಸ್‌ಗಳನ್ನು ನಿರ್ಮಾಣ ಮಾಡುವುದು.	18924	473	ಡಿಟೋ	ಐದು ತಿಂಗಳು
3 ಚಾಮರಾಜನಗರದಲ್ಲಿ ಕಂಬೈಂಡ್ ಆಸ್ಪತ್ರೆಗೆ ಸೇರಿದಂತೆ ಹತ್ತು ಹಾಸಿಗೆಗಳ ಪಾರ್ಟ್ ನಿರ್ಮಾಣ ಮಾಡುವುದು	34650	867	1 ರಿಂದ 3	ಎಂಟು ತಿಂಗಳು

ಕಾಲಂ ನಂ 6 : ಟೆಂಡರ್ ಫಾರಂಗಳ ದರ (ಪ್ಲಸ್ ಶೇಕಡ 3 ಮಾರಾಟ ತೆರಿಗೆ)
ಪ್ರತಿ ಕೆಲಸಕ್ಕೂ ರೂ. 5–15

ಸೂಚನೆ — (1) ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನು ಕೊಡದೆ ತಿರಸ್ಕರಿಸುವ ಹಕ್ಕು ತಕ್ಕ ಅಧಿಕಾರಿಯವರಿಗೆ ಮೀಸಲಾಗಿದೆ.

(2) ಎಸ್ಟಿಮೇಟ್ ವಿವರ, ಕಾಂಟ್ರಾಕ್ಟ್ ಮುಂತಾದವುಗಳ ಪುರತ್ತುಗಳು ಇವುಗಳ ಬಗ್ಗೆ ಹೆಚ್ಚು ವಿವರಗಳನ್ನು ಚಾಮರಾಜನಗರದಲ್ಲಿ ಇರುವ, ಚಾಮರಾಜನಗರ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿಯಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5–30 ರ ವರೆಗೆ ಮಾತ್ರ ಕಚೇರಿ ಕೆಲಸದ ವೇಳೆಗಳಲ್ಲಿ ಪಡೆಯಬಹುದು.

(3) ಟೆಂಡರ್ ಫಾರಂಗಳೊಡನೆ ಗೆಜಿಟೆಡ್ ಅಧಿಕಾರಿಯವರೊಬ್ಬರಿಂದ ದೃಢಪಡಿಸಲಾದ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಪ್ರತಿಯೊಂದನ್ನು ಟೆಂಡರ್ ಕಂಟ್ರಾಕ್ಟರ್ ಲಗತ್ತಿಸಬೇಕು.

ಕೆ ಶ್ರೀನಿವಾಸನುರ್ತಿ,
ಎಕ್ಸಿಕ್ಯುಟೀವ್ ಇಂಜಿನಿಯರ್, ಚಾಮರಾಜನಗರ ವಿಭಾಗ

ವುಡ್‌ಲ್ಯಾಂಡ್ಸ್ 4–8–72ರಿಂದ ಅಮೋಘ 14ನೇವಾರ

.... ಚಿತ್ರಾಕರ್ಷ ಕನ್ನಡ ಚಿತ್ರ ....

ಹೃದಯಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು : ಎಂ ಜಿ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10–30 ಕಣ್ತೆರೆದು ನೋಡು

ಅಪೆರಾ 28 7 72 ರಿಂದ

ಫಿಲಂ ಲ್ಯಾಂಡ್‌ರವರ ಮಹೋನ್ನತ ಹಿಂದಿ ಚಿತ್ರ

ಬನ್ ಪೂಲ್

ಪಾತ್ರ : ಜಿತೇಂದ್ರ, ಬಬಿತ
ದಿಗ್ದರ್ಶನ : ವಿಜಯಭಟ್ ಸಂಗೀತ : ಲಕ್ಷ್ಮೀಕಾಂತ್ ಪ್ಯಾರೇಲಾಲ್
ದಿನ 3 ಪ್ರದರ್ಶನಗಳು

Protect the Cow

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore